ತಾಯಿಯ ಎಣೆಯಿಲ್ಲದ ಪ್ರೀತಿ, ತಂದೆಯ ಅಪಾರವಾದ ತಾಳ್ಮೆ, ಅಕ್ಕ-ತಂಗಿಯರ ಕರುಣೆ ಮತ್ತು ಕ್ರಿಯಾಶೀಲತೆ, ಕೌಟುಂಬಿಕ ಜವಾಬ್ದಾರಿ ಹೊತ್ತ ತಮ್ಮಂದಿರ ಹುರುಪು ಮತ್ತು ಹಾಸ್ಯ ಪ್ರಜ್ಞೆ ಹಾಗೂ ನನ್ನೆಲ್ಲಾ ಸಾರ್ವಜನಿಕ ಚಟುವಟಿಕೆಗಳಲ್ಲಿ ಬೆನ್ನ ಹಿಂದೆ ನಿಲ್ಲುವ ಗಂಡನ ಸಹಕಾರ ಮತ್ತೆ ಮುಖ್ಯವಾಗಿ ನನ್ನಿಬ್ಬರು ಮಕ್ಕಳ ಜೊತೆ ಕವಿತೆಯೊಂದಿಗೆ ನನ್ನ ನಿರಂತರ ಪಾಲುದಾರಿಕೆ -ಇವೆಲ್ಲಾ ಸಂಗತಿಗಳು ನನ್ನನ್ನು ಪೊರೆಯುತ್ತಿವೆ.

ಹಿಂದೆ Hadrumetum ಎಂದು ಕರೆಯಲಾಗುತ್ತಿದ್ದ ಸುಂದರ ಕರಾವಳಿ ನಗರವಾದ Sousseಯಲ್ಲಿ ವಾಸಿಸುತ್ತಿರುವ ನಾನು, ಅದರ ಶ್ರೀಮಂತ ಇತಿಹಾಸ ಮತ್ತು ರೋಮಾಂಚಕ ಸಂಸ್ಕೃತಿಯಿಂದ ನಿರಂತರವಾಗಿ ಸ್ಫೂರ್ತಿ ಪಡೆಯುತ್ತೇನೆ. ನನ್ನ ಕವಿತೆಯಲ್ಲಿ ನನ್ನ ಪ್ರೀತಿಯ ಶಹರವೇ ಪ್ರಿಯತಮ. ಆತನ ಬೆರಗುಗೊಳಿಸುವ ಕಡಲತೀರಗಳು ಮತ್ತು ಬೆಚ್ಚನೆಯ ಪ್ರೀತಿ ತೋರುವ ಜನ ಸಮುದಾಯವು, ನನ್ನ ವೈಯಕ್ತಿಕ ಮತ್ತು ವೃತ್ತಿಪರ ಬದುಕು ಎರಡಕ್ಕೂ ಪರಿಪೂರ್ಣ ಹಿನ್ನೆಲೆಯನ್ನು ಒದಗಿಸುತ್ತವೆ.

**◆ ನಿಮ್ಮ ಜೀವನದ ಸಿಹಿ ಮತ್ತು ಕಹಿ ಘಟನೆಗಳನ್ನು ಹೇಳಬಹುದಾ? ಮತ್ತವು ನಿಮ್ಮ ವ್ಯಕ್ತಿತ್ವದ ಮೇಲೆ ಬೀರಿದ ಪರಿಣಾಮಗಳೇನು?**

ಯಾವುದಂತ ನೆನಪಿಸಿಕೊಳ್ಳಲಿ? ನಾನು ಸಿಹಿ ಘಟನೆಗಳಿಗಿಂತ ಹೆಚ್ಚು ಬೆಲೆಯನ್ನು ನನ್ನ ಜೀವನದ ಕಹಿ ಘಟನೆಗಳಿಗೆ ಕೊಡುತ್ತೇನೆ. ಏಕೆಂದರೆ ಇವತ್ತಿನ ನನ್ನನ್ನು ರೂಪಿಸುತ್ತಿರುವುದೇ ಅವು. ಮತ್ತೀಗಲೂ ನನ್ನ ಬರವಣಿಗೆಯ ನಾಡಿ ಮಿಡಿತ ಅವಕ್ಕೆ ಚೆನ್ನಾಗಿ ಗೊತ್ತು. ಬರಹಗಾರ್ತಿಯಾಗಿ ನನ್ನ ವ್ಯಕ್ತಿತ್ವವನ್ನು ಆಳವಾಗಿ ಕಲಕುವ ಮತ್ತು ಪರಿವರ್ತನೆಗೊಳಿಸುವ ನಿರಂತರ ಚಲನಶೀಲ ಗುಣ ಅವುಗಳಿಗಿದೆ. ಎಂತಹ ಕಹಿ ಘಳಿಗೆಗಳನ್ನೂ ಪ್ರಯತ್ನಪೂರ್ವಕವಾಗಿ ಮರೆತು ಬಿಡುವ ಬಲವಾದ ಸಾಮರ್ಥ್ಯವನ್ನು ನಾನು ಬೆಳೆಸಿಕೊಂಡಿದ್ದೇನೆ. ಆದರೆ, ಕಹಿ ಅನುಭವಗಳನ್ನು ದಾಟಿ ಮುನ್ನುಗ್ಗುವ ಅವಕಾಶಗಳನ್ನು ನನಗೆ ಒದಗಿಸಿರುವುದು ಬಾಳಿನ ಸಿಹಿ ಅನುಭವಗಳು. ಅದರಲ್ಲೂ ವಿಶೇಷವಾಗಿ ಪ್ರೀತಿಪಾತ್ರ ಜನರೊಡನೆ ಹೆಣೆದುಕೊಂಡಿರುವ ಒಳ್ಳೆಯ ಅನುಭವಗಳು. ಅವು ಮಾತ್ರ ನನ್ನ ಭಾವನೆ, ಆಲೋಚನೆ ಮತ್ತು ಸಂಭಾಷಣೆಗಳನ್ನು ನಿರಂತರವಾಗಿ ಆತುಕೊಂಡಿರುತ್ತವೆ.

**◆ ನೀವು ಕೋಪಗೊಳ್ಳುವುದು ಯಾವಾಗ?**

ನಾನು ತಾಳ್ಮೆಯ ವ್ಯಕ್ತಿ ಮತ್ತು ನಾನು ಕೋಪಗೊಳ್ಳುವುದು ತೀರಾ ಕಡಿಮೆ. ಬೇಕಾದರೆ ಪರೀಕ್ಷಿಸಿ ನೋಡಿ? (ನಗು)

**◆ ಹೌದಾ...ಆಯ್ತು ಮುಂದೆ ಖಂಡಿತ ಪ್ರಯತ್ನಿಸಿ ನೋಡುವೆ? (ನಗು)**

ಆಯ್ತು ಪರೀಕ್ಷೆ ಮಾಡಿ. ಕೋಪವನ್ನು ನಿಯಂತ್ರಿಸುವ ಗುಣ ನನಗಿದೆ. ಆದಾಗ್ಯೂ, ನಂಬಿಕೆ ಹುಸಿ ಹೋದಾಗ ಅಥವಾ ಬಾಳಿನ ಸಮಗ್ರತೆ ಹಾಗೂ ಸಹಭಾಗಿತ್ವ, ಪ್ರೀತಿ ಮತ್ತು ಪ್ರಾಮಾಣಿಕತೆ ಕಳೆದು ಹೋದಾಗ ನನಗೆ ಬಹಳ ದುಃಖವಾಗುತ್ತದೆ.

**◆ ಒಬ್ಬ ಸುಶಿಕ್ಷಿತ ಆಧುನಿಕ ಕಾಲದ ಮಹಿಳೆಯಾಗಿ ಸಾಂಪ್ರದಾಯಿಕ ಇಸ್ಲಾಂ ಅನ್ನು ನೀವು ನೋಡುವ ಅಥವಾ ಅರ್ಥೈಸಿಕೊಳ್ಳುವ ಕ್ರಮ ಯಾವುದು?**

ಸಾಂಪ್ರದಾಯಿಕ ಇಸ್ಲಾಂನಲ್ಲಿ ಪ್ರಾಚೀನ ಪರಂಪರೆ ಮತ್ತು ಆಧುನಿಕ ತತ್ವಗಳು ಶ್ರೀಮಂತವಾಗಿ ಬೇರೂರಿವೆ. ಜೊತೆಗೆ ನಮ್ಮ ಕಾಲದಲ್ಲಿ ಅರಳುತ್ತಿರುವ ಹೊಸ ಹೊಸ ಸನ್ನಿವೇಶಗಳನ್ನೂ ಅದು ಒಪ್ಪಿಕೊಳ್ಳುತ್ತದೆ. ಒಬ್ಬ ಸುಶಿಕ್ಷಿತ ಆಧುನಿಕ ಮಹಿಳೆಯಾಗಿ ಈ ಆಧಾರದಲ್ಲಿ ಇಸ್ಲಾಂ ಅನ್ನು ನೋಡಲು ಮತ್ತು ಅರ್ಥಮಾಡಿಕೊಳ್ಳಲು ನಾನು ಬಯಸುತ್ತೇನೆ. ಸಾಂಪ್ರದಾಯಿಕ ಇಸ್ಲಾಂ ನನಗೆ, ವೈವಿಧ್ಯಮಯ ಸ್ವಾರಸ್ಯಗಳಿಂದ ಕೂಡಿರುವ ಮತ್ತು ಬೇರೆ ಬೇರೆ ಪ್ರದೇಶಗಳಲ್ಲಿ ಶತಮಾನಗಳಿಂದ ಅಳವಡಿಸಿಕೊಂಡಿರುವ ಸಾಂಸ್ಕೃತಿಕ ಅಭಿವ್ಯಕ್ತಿಯ ಕ್ರಿಯಾಶೀಲ ಚೌಕಟ್ಟಿನಂತೆ ಕಾಣುತ್ತದೆ. ಇಸ್ಲಾಮಿಕ್ ಬೋಧನೆಗಳನ್ನು ಅವು ಹುಟ್ಟಿದ ಐತಿಹಾಸಿಕ ಮತ್ತು ಸಾಮಾಜಿಕ ಸನ್ನಿವೇಶಗಳಲ್ಲಿಟ್ಟು ಅರ್ಥ ಮಾಡಿಕೊಂಡು, Critical insider ಆಗಿ ಸೂಕ್ಷ್ಮ ಮಸೂರದ ಮೂಲಕ ನೋಡುವುದು ಅತ್ಯವಶ್ಯಕ ಅಂತ ನನ್ನ ಅನಿಸಿಕೆ. ಯಾವುದೇ ಮತ ಧರ್ಮವಿರಲಿ, ಮನುಷ್ಯನ ಸ್ಪಿರಿಚ್ಯುವಲ್ ಸ್ಪೇಸ್ ನನಗೆ ಬಹಳ ಮುಖ್ಯ. ಜಗತ್ತಿನಾದ್ಯಂತ ಹಬ್ಬಿ, ಬೇರು ಬಿಟ್ಟ ಸೂಫಿ